

# ದೀಪಾವಳಿ ಸಡಗರಕ್ಕೆ ಕಚ್ಚೆ ಧೋತಿ ಸಾಥ್

ಕಚ್ಚೆ ಪ್ಯಾಂಟ್, ಕಚ್ಚೆ ಧೋತಿ, ಕಚ್ಚೆ ಸ್ಕರ್ಟ್ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ದೀಪಾವಳಿ ಹಬ್ಬಕ್ಕೆ ಸಾಂಪ್ರದಾಯಿಕ, ಆಧುನಿಕ ಎರಡೂ ಮನೋಭಾವದವರನ್ನು ಸೆಳೆಯಲು ವಿನ್ಯಾಸಗಾರರು ಸೃಷ್ಟಿಸಿದ ತಂತ್ರ ಇದು ಎಂದರೆ ತಪ್ಪಿಲ್ಲ.

■ ಯು. ಅನಂತ್

ದೀಪಾವಳಿ ಎಂದರೆ ದೊಡ್ಡ ಹಬ್ಬ. ಹಣತೆ, ಬೆಳಕು, ಬಣ್ಣಗಳ ಸಮ್ಮಿಲನದೊಂದಿಗೆ ಸಂಭ್ರಮಕ್ಕೂ ಹೆಚ್ಚು ಎಡೆಮಾಡಿಕೊಡುವ ಹುಮ್ಮಸ್ಸಿನ ಹಬ್ಬ. ಹಬ್ಬದಲ್ಲಿ ಮನಸ್ಸಿಗೆ ಮುದ ನೀಡಲು ಫ್ಯಾಷನಬಲ್ ಉಡುಗೆ ತೊಡುಗೆ, ಒಡವೆ ವಸ್ತ್ರಗಳು ಬೇಡವೇ? ಬೆಳಕಿನ ಪ್ರಖರತೆಗೆ ಸಾಥಿ ನೀಡಲು ಹೊಸಬಟ್ಟೆ ಆಭರಣಗಳ ಗುಂಗು ಇದ್ದೇ ಇದೆ. ಫ್ಯಾಷನ್ ವಿನ್ಯಾಸಗಾರರು ಪ್ರತೀ ವರ್ಷ ಹೊಸ ವಿನ್ಯಾಸದ ಉಡುಗೆಗಳನ್ನು ತಂದು ಹೆಂಗಳೆಯರ ಮನತಣಿಸುತ್ತಾರೆ. ಈ ದೊಡ್ಡ ಹಬ್ಬಕ್ಕೆ ಕಚ್ಚೆ ಧೋತಿ ಸ್ಕರ್ಟ್, ಕಚ್ಚೆ ಧೋತಿ ಸೀರೆಗಳು ಪರ್ಫೆಕ್ಟ್ ಆಗಿ ಇರುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ಕಚ್ಚೆ ಸೀರೆ ಇರಲಿ, ಕಚ್ಚೆ ಸ್ಕರ್ಟ್ ಇರಲಿ ತೊಡಲು ಸಮಯ ಬೇಕಲ್ಲವೇ? ಈ ಸಮಸ್ಯೆಯನ್ನು ಫ್ಯಾಷನ್ ಡಿಸೈನರ್ ಮನಸ್ಸಿನಲ್ಲಿ ಇಟ್ಟುಕೊಂಡು ಮಹಿಳೆಯರ ಮನದಾಸೆ ತಣಿಸಲೆಂದೇ ರೆಡಿಮೇಡ್ ಕಚ್ಚೆ ಸೀರೆ, ಸ್ಕರ್ಟ್ ಅನ್ನು ಮಾರುಕಟ್ಟೆಗೆ ತಂದಿದ್ದಾರೆ. ಹಾಗೆಂದು ಧೋತಿ ಪ್ಯಾಂಟ್ ಸುಮಾರು ಹದಿನೈದು ವರ್ಷ ಹಳೆಯ ಫ್ಯಾಷನ್. ಈ ಧೋತಿಗೆ ಸಾಥಿ ನೀಡಿದ್ದು ಧೋತಿ ಸ್ಕರ್ಟ್. ಇದೀಗ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

ಧೋತಿ ಸ್ಕರ್ಟ್‌ನಲ್ಲೂ ಅದೆಷ್ಟು ವಿನ್ಯಾಸ! ಸಾಮಾನ್ಯವಾಗಿ ಸ್ಕರ್ಟ್ ಎಂದಾಕ್ಷಣ ಮಂಡಿಯವರೆಗೋ ಅಥವಾ ಮಂಡಿಯಿಂದ ಕೊಂಚ ಕೆಳಗಿನವರೆಗೋ ಇರುವ ಉಡುಗೆ ಎಂದು ಭಾವಿಸುವವರೇ ಅಧಿಕ. ಆದರೆ ಇದೀಗ 'ಫ್ಲೋರ್ ಲೆನ್ತ್' ಸ್ಕರ್ಟ್ ಬಂದಿದ್ದು ಸೊಂಟ ಭಾಗದಿಂದ ನೆಲದವರೆಗೂ ಇದ್ದು ಉದ್ದದ, ಹೆಚ್ಚು ಫ್ಲೇರ್ ಇರುವ ಸ್ಕರ್ಟ್ ಟ್ರೆಂಡಿಂಗ್‌ನಲ್ಲಿದೆ.

ಈ ಧೋತಿ ಸ್ಕರ್ಟ್ ಮಾತ್ರ ಕಾಲಿನ ಮಣಿಕಟ್ಟಿನಿಂದ ಸ್ವಲ್ಪ ಮೇಲಕ್ಕೆ ನಿಲ್ಲುತ್ತದೆ. ಹೆಚ್ಚು ನೆರಿಗೆಗಳಿಂದ ಕೂಡಿದ ಈ ಧೋತಿ ಪ್ಯಾಂಟ್ ಮೇಲ್ನೋಟಕ್ಕೆ ಧೋತಿ ಸೀರೆ ಥರನೇ ಕಾಣಿಸುತ್ತದೆ. ಇದು ಹಬ್ಬಕ್ಕೆ ಸಾಂಪ್ರದಾಯಿಕ ಹಾಗೂ ಆಧುನಿಕ ಎರಡೂ ರೀತಿಯ ಲುಕ್ ಕೊಡಲು ಸಹಕಾರಿಯಾಗಿದೆ.

ಹಿಂದೆಲ್ಲ ಧೋತಿ ಎಂದರೆ ಅದು ಪುರುಷರ ಉಡುಪು ಎಂದೇ ಖ್ಯಾತಿ ಗಳಿಸಿತ್ತು. ಆದರೆ ಇದು ಮಹಿಳೆಯರ ಫ್ಯಾಷನ್ ಉಡುಗೆಯಾಗಿ ಬಂದದ್ದು ಕಳೆದ ಸುಮಾರು ಹದಿನೈದು ವರ್ಷದಿಂದ ಈಚೆಗೆ. ಇದಕ್ಕೂ ಮುನ್ನ ಪಂಜಾಬಿ ಶೈಲಿಯ ಸ್ಟ್ರೇಟ್ ಕಟ್ ಪ್ಯಾಂಟ್, ಪಲಾಜೊದಂತಹ ದೊಗಳೆ ಪ್ಯಾಂಟ್‌ಗಳು ಟ್ರೆಂಡ್‌ನಲ್ಲಿದ್ದರೂ ಕಾಲುಗಳಿಗೆ ಫಿಟ್ ಆಗಿ ಕಾಣಿಸುವ ಉಡುಪು ಬಂದಿದ್ದು ಫ್ಯಾಷನ್ ಜಗತ್ತಿನಲ್ಲಾದ ಮಾರ್ಪಾಡು ಎನ್ನಬಹುದು.

ಧೋತಿ, ಸ್ಕರ್ಟ್, ರೆಡಿಮೇಡ್ ಸೀರೆ.. ಇಂತಹ ಉಡುಪು ಧರಿಸುವಾಗ ಅದರ ಮೇಲೆ ಮ್ಯಾಚಿಂಗ್ ಅಥವಾ ಕಾಂಟ್ರಾಸ್ಟ್ ಬಣ್ಣದ ಕುರ್ತಿ, ಬ್ಲೌಸ್ ಅಥವಾ ಮೇಲಂಗಿ ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ರೇಷ್ಮೆ ಟಾಪ್ ಕೂಡ ಧರಿಸಬಹುದು. ಇದು ಎಥ್ನಿಕ್ ಲುಕ್ ಕೊಡಲು ಸಹಕಾರಿ.

ಇವೆಲ್ಲವನ್ನೂ ಆನ್‌ಲೈನ್‌ನಲ್ಲೂ ಕೊಂಡುಕೊಳ್ಳಬಹುದು. ಅಮೆಜಾನ್, ವೂನಿಕ್, ಕ್ರಾಫ್ಟ್ಸ್‌ವಿಲ್ಲಾ, ಮೀಶೊದಂತಹ ಆನ್‌ಲೈನ್ ಕಂಪನಿಗಳಲ್ಲಿ ಇಂಥ ಸಿದ್ಧ ಉಡುಪು ಲಭ್ಯ. ಜವಳಿ ಅಂಗಡಿಗಳಲ್ಲೂ ಕೈಗೆಟಕುವ ದರಕ್ಕೆ ಫ್ಯಾಷನಬಲ್ ಆಗಿರುವ ಇಂತಹ ಉಡುಗೆಗಳು ಸಿಗುತ್ತವೆ.

## ರೇಷ್ಮೆ, ಸ್ಯಾಟಿನ್ ವಸ್ತ್ರವೈಭವ

ದೀಪಾವಳಿ ಹಬ್ಬಕ್ಕೆ ರೇಷ್ಮೆ ಸೀರೆ, ಉಡುಪು ಉತ್ತಮ ಮೆರುಗು ಕೊಡುತ್ತದೆ. ಸೀರೆಗಳಲ್ಲದೆ ಲೇಟೆಸ್ಟ್ ಡಿಸೈನ್‌ನ ಅನಾರ್ಕಲಿ, ಕುರ್ತಾ, ಚೂಡಿದಾರ್, ಪಲಾಜೊ ಕೂಡ ಧರಿಸಬಹುದು. ಕುರ್ತಾ ಹಾಗೂ ಪಲಾಜೊವನ್ನು ಮಿಕ್ಸ್ ಅಂಡ್ ಮ್ಯಾಚ್ ಆಗಿಯೂ ಧರಿಸಬಹುದು. ಕಾಂಜೀವರಂ, ಬನಾರಸಿ ಸೀರೆಗಳೂ ಬೆಳಕಿನ